ಮದುವೆಗೆ ಒಪ್ಪಿಕೊಂಡುಬಿಟ್ಟೆ. ಅಲ್ಲೇ ಅಂಗಡಿ ನೋಡಿಕೊಂಡಿರಲಿ ಎಂದು ಹೇಳಿದಳು. ಆದರೆ ಅವಳೇ ಜೊತೆ ಇರೋಕಾಗೋಲ್ಲ ಎಂದ ಮೇಲೆ ಆ ಅಂಗಡಿ ಯಾಕೆ ಎನ್ನಿಸ್ತು. ಅವಳ ಎದುರಿನಲ್ಲೆ ಅಲ್ಲಿ ಇರೋಕೆ ಇಷ್ಟವಾಗಲಿಲ್ಲ.' ಬಾಲನ್‌ನ ಕಂಠ ಗದ್ಗದಿತವಾಗಿತ್ತು.

ನನ್ನ ಊಹೆಗೂ ಮೀರಿ ಬೆಳೆದಿದ್ದ ಬಾಲನ್. ಜೀವನದ ಇಂತಹ ದೊಡ್ಡ ಆಘಾತವನ್ನು ಅದು ಹೇಗೆ ಶಾಂತವಾಗಿ ಸ್ವೀಕರಿಸಿದನೊ. ಯಾಕೋ ಭಗವದ್ಗೀತೆಯ, 'ಮುಕ್ತಸಂಗೋ ನಹಂವಾದೀ ಧೃತ್ಯುತ್ಸಾಹ ಸಮನ್ವಿತಃ, ಸಿದ್ಧ್ಯಸಿದ್ಧ್ಯೋ ನಿರ್ವಿಕಾರಃ ಕರ್ತಾ ಸಾತ್ವಿಕ ಉಚ್ಯತೇ' ಶ್ಲೋಕ ನೆನಪಾಗಿತ್ತು. ಪ್ರಾಯಶಃ ಬಾಲನ್ ಯಾವುದೇ ವೇದ, ಶಾಸ್ತ್ರ, ಭಗವದ್ಗೀತೆಗಳನ್ನು ಓದಿರಲಿಕ್ಕಿಲ್ಲ. ಅಥವಾ ಯಾರೂ ಅವನಿಗೆ ಅದನ್ನು ತಿಳಿಸಿರಲಿಕ್ಕೂ ಇಲ್ಲ. ತನ್ನ ನಡೆಯಲ್ಲೆ ಸಾಧಿಸಿ ತೋರಿಸಿದ್ದಾನೆ. ಎಷ್ಟೇ ತಿಳಿದವರಿಗೂ ನಡೆಯಲ್ಲಿ ಅಸಾಧ್ಯವಾದುದ್ದನ್ನು ಸ್ಥಿತಪ್ರಜ್ಞನಂತೆ ಮಾಡಿ ತೋರಿಸಿದ್ದಾನೆ.

'ಆಗ ನಾನು ತರಕಾರಿ ಗಾಡಿ ಜೊತೆಗೆ ಖುಷಿಯಾಗಿಯೇ ಇದ್ದೆ ಅಮ್ಮಾವ್ರೆ. ದಿನಾ ಬೆಳಿಗ್ಗೆ ಸಂತೆಗೆ ಹೋಗುವುದು, ತರಕಾರಿ ಕೊಳ್ಳೋದು, ವ್ಯಾಪಾರ ಮಾಡೋದು. ನಿಮ್ಮಂತಹ ಅಮ್ಮಾವ್ರು ತರಕಾರಿ ಕೊಳ್ತೀರಿ, ಮಾತನಾಡಿಸ್ತೀರಿ... ಮತ್ತೆ ನಾಳೆ ಆಗತ್ತೆ... ಅದೇ ಸಂತೆ... ಬೇರೆ ತರಕಾರಿ... ಹೀಗೆಯೇ ಜೀವನ ಹೋಗ್ತಾ ಇರುತ್ತೆ ಅಲ್ವಾ ಅಮ್ಮಾವ್ರೆ. ನೋಡಿ... ನಾನೀಗ ಹಿಂದಿನ ಅದೇ ಬಾಲನ್. ಬರಲೇ ಅಮ್ಮಾವ್ರೆ...' ಎಂದು ಹೊರಡಲು ಅನುವಾದವನಿಗೆ ಕಾಫಿಯನ್ನಾದರೂ ಕುಡಿಯುವಂತೆ ಒತ್ತಾಯಿಸಿದೆ.

ಇಷ್ಟು ಔದಾರ್ಯ, ಸಹನೆ, ತಾಳ್ಮೆ ಮನುಷ್ಯ ಮಾತ್ರದವನಿಗೆ ಸಾಧ್ಯವೆ ಎಂಬಂತೆ ಬಾಲನ್‌ನತ್ತ ನೋಟ ಹರಿಸಿದರೆ, ಅದೇ ಆಗಷ್ಟೇ ಅವನ ತುಟಿಯಂಚಿನಲ್ಲಿ ಅರಳಲೆತ್ನಿಸುತ್ತಿದ್ದ ಕಿರುನಗು ಇದು ಸಾಧ್ಯ ಎಂಬ ಅರಿವು ಮಾಡಿಕೊಟ್ಟಿತ್ತು.


**ಶಾರದಾ ವಿ. ಮೂರ್ತಿ**

ಹುಟ್ಟೂರು ಶಿವಮೊಗ್ಗ. ಕಥೆ, ಕವನ, ಕಾದಂಬರಿ, ಪ್ರಬಂಧ, ಮಕ್ಕಳ ಸಾಹಿತ್ಯ ಸೇರಿದಂತೆ ಹಲವು ಪ್ರಕಾರಗಳಲ್ಲಿ ಬರೆದಿದ್ದಾರೆ. ಈವರೆಗೆ 17 ಕಾದಂಬರಿಗಳು, ಐದು ಕಥಾ ಸಂಕಲನಗಳು, ಎರಡು ಮಕ್ಕಳ ಕವನ ಸಂಕಲನ, ಎರಡು ನಾಟಕ ಸಂಕಲನ, ಎರಡು ಮಕ್ಕಳ ನಾಟಕ, ಮೂರು ಲೇಖನಗಳ ಸಂಕಲನ, ಎರಡು ಮಕ್ಕಳ ಕಥಾ ಸಂಕಲನಗಳು ಪ್ರಕಟವಾಗಿವೆ. ದೂರದರ್ಶನ, ಆಕಾಶವಾಣಿಯಲ್ಲಿ ಅವರು ಬರೆದ ನಾಟಕ, ರೂಪಕ, ಕವನ, ಹಾಡುಗಳು ಪ್ರಸಾರವಾಗಿವೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.